ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಸಮುದ್ಯತಾ ಕಂಜರ್ಪಣೆ ದಕ್ಷಿಣ ಕನ್ನಡದವರು. ಸಹ್ಯಾದ್ರಿಯ ತಪ್ಪಲಿನಲ್ಲಿರುವ ಸುಳ್ಯ ಅವರ ಹುಟ್ಟೂರು. ಪ್ರಸ್ತುತ ಬೆಂಗಳೂರು ನಿವಾಸಿ. ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಲ್ಲಿ ಸಾಮಾಜಿಕ ಮಾಧ್ಯಮ ನಿರ್ವಹಣೆ ಮತ್ತು ಮಾಹಿತಿ ಶಿಕ್ಷಣ ಸಂವಹನ ಸಂಯೋಜಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ತುಂಬಾ ಓದುವುದು, ಚಿತ್ರ ಬಿಡಿಸುವುದು ಮತ್ತು ಬರೆಯುವುದು ಅವರ ಪ್ರೀತಿಯ ಕಾಯಕ. ಹಲವು ಮಾಧ್ಯಮಗಳಲ್ಲಿ ಅಂಕಣಕಾರ್ತಿಯಾಗಿಯೂ ಅವರು ಕನ್ನಡದ ಓದುಗರಿಗೆ ಪರಿಚಿತರು.

ಅರೆಸ್ಟ್ ಆಗಿದೆ ಎಂದು ಓಡಾಡುತ್ತಿದ್ದರು. ಸ್ವಲ್ಪ ಹೊತ್ತಲ್ಲೇ ಡಾಕ್ಟರ್ ಹೊರಬಂದು ಬಾಡಿ ತೊಗೊಂಡು ಹೋಗೋಕೆ ವ್ಯವಸ್ಥೆ ಮಾಡಿ ಎಂದಿದ್ದರು. ನಿಮಿಷಗಳಲ್ಲಿ ಹಾಗೆ ಪದ್ದಮ್ಮ 'ಬಾಡಿ'ಯಾಗಿ ಬದಲಾಗಿದ್ದರು. ದುಃಖ ಪಡುವ ಮೊದಲೇ ಜವಾಬ್ದಾರಿಗಳು ಬೇಕಾದಷ್ಟಿವೆ ಎನ್ನುವುದು ಅಳುತ್ತಾ ನಿಂತ ಕುಸುಮಾ, ಸೂರ್ಯನನ್ನು ನೋಡಿದ ಕೂಡಲೇ ಜಾನುವಿಗೆ ತಿಳಿದುಹೋಗಿತ್ತು.

* * *

ಮನೆ ಬಾಗಿಲಿಗೆ ಬರುವಷ್ಟರಲ್ಲಿ ಪದ್ದಮ್ಮನ ಕುಟುಂಬದವರೆಲ್ಲ ಸೇರಿದ್ದರು. ಒಳಗೆ ಮಲಗಿಸಲು ಸಹಾಯ ಮಾಡಿದ ಆಂಬುಲೆನ್ಸ್ ಡ್ರೈವರಿಗೆ ಇನ್ನೂ ಐನೂರು ಸೇರಿಸಿ ಕೊಟ್ಟು ಒಳಬರುವ ಹೊತ್ತಿಗೆ ಪದ್ದಮ್ಮನ ನಾಲ್ಕೂ ಅಕ್ಕ ತಂಗಿಯರು, ಮೂವರೂ ಅಣ್ಣ ತಮ್ಮಂದಿರು ಒಳಗೆ ಕೂತು ಅಳಲು ಶುರು ಮಾಡಿದ್ದರು.

'ಜಾನೂ, ಅಮ್ಮನಿಗೊಂದು ಸೀರೆ ಹೊದಿಸಮ್ಮ, ಆಸ್ಪತ್ರೆಯಿಂದ ಬಂದಿರೋದು, ಅವರೇ ಸುತ್ತಿದಾರೆ, ಮತ್ತೆ ಸ್ನಾನ ಗೀನ ಎಲ್ಲ ಮಾಡಿಸೋಕಾಗಲ್ಲ' ಯಾರೋ ಹೇಳಿದರು.

'ಒಂದು ಸೀರೆ ಸುತ್ತಿದ್ದರೆ ಚೆನ್ನಾಗಿರೋದು' ಇನ್ಯಾರೋ ಹೇಳಿದರು.

ಒಳಗಿಂದ ಜಾನು ಎರಡು ಸೀರೆ ತಂದು ಪದ್ದಮ್ಮನಿಗೆ ಸುತ್ತಲು ನೋಡಿದಳು. ಅವಳ ಊಹೆಗೂ ಮೀರಿ ಪದ್ದಮ್ಮ ಭಾರವಾಗಿದ್ದರು. ಯಾರಾದರೂ ಬರುತ್ತಾರೇನೋ ಸಹಾಯಕ್ಕೆ ಎಂದು ನೋಡಿದಳು, ಎಲ್ಲರೂ ನಾಲ್ಕೈದು ಅಡಿ ದೂರದಲ್ಲೇ ನಿಂತಿದ್ದರು. ಸೂರ್ಯನನ್ನೇ ಸಹಾಯಕ್ಕೆ ಕರೆದು ಸ್ವಲ್ಪ, 'ಅಮ್ಮನನ್ನು ಆ ಕಡೆ ತಿರುಗಿಸು, ಸೀರೆ ಕೆಳಗಿಂದ ತೊಗೊ' ಎಂದು ಹಾಗೇ ಸುತ್ತಿ ಮೇಲೊಂದು ಸೀರೆ ಹೊದಿಸಿದಳು.

ಕುಸುಮಾ ಅಲ್ಲೇ ತುಸು ದೂರದಲ್ಲಿ ಒಂದಿಷ್ಟು ಊದುಬತ್ತಿಗಳನ್ನು ಹಚ್ಚಿಟ್ಟು ಕಣ್ಣೊರಿಸಿಕೊಳ್ಳುತ್ತಾ ಕೂತಳು. ಶಂಕರಪ್ಪ, 'ಒಂಟಿಯಾಗಿ ಮಾಡಿ ಹೋದ್ಯಲ್ಲೇ, ಇನ್ಯಾರಿದಾರೆ ನನಗೆ' ಎಂದು ಹೃದಯ ಬಿರಿಯುವಂತೆ ಅಳುತ್ತಿದ್ದರು.

'ಮನೆ ತುಂಬ ಜನ ಬರೋದು ಇಷ್ಟ ಅಲ್ವಾ ನಿಮಗೆ, ಈಗ ನೋಡಿ, ಎಲ್ಲರೂ ಬಂದಿದಾರೆ' ಜಾನು ಪದ್ದಮ್ಮನ ಕೆನ್ನೆಯನ್ನು ಬೊಗಸೆಯಲ್ಲಿ ಹಿಡಿದಳು.

'ಜಾನು, ಸ್ವಲ್ಪ ಕುರ್ಚಿ ಎಲ್ಲ ತರಿಸಮ್ಮ, ಮನೆ ಮುಂದೆ ಬೆಂಕಿ ಹಚ್ಚಿಸಬೇಕು, ಎಲ್ಲ ವ್ಯವಸ್ಥೆ ಮಾಡು' ದೊಡ್ಡತ್ತೆಯೊಬ್ಬರ ಧ್ವನಿ.

ಹೊರಹೋಗಿ ಅಲ್ಲಿದ್ದ ಯಾರಿಗೋ ದುಡ್ಡುಕೊಟ್ಟು ವ್ಯವಸ್ಥೆ ಮಾಡಿ ಎಂದೆಲ್ಲ ಹೇಳಿ ಮೇಲೆ ಬಂದ ಕೂಡಲೇ ಜಾನುವಿಗೆ ಸಿಟ್ಟು ನೆತ್ತಿಗೇರಿತ್ತು. ಪದ್ದಮ್ಮನ ಬಳಿಯಲ್ಲಿ ಒಬ್ಬರೂ ಇರಲಿಲ್ಲ. ಒಂಟಿಯಾಗಿ ಮಲಗಿದ್ದ ಪದ್ದಮ್ಮನಿಂದ ಸುಮಾರು ದೂರದಲ್ಲಿ ಎಲ್ಲರೂ ಕೂತು - ನಿಂತು ಮಾತಾಡುತ್ತಿದ್ದರು. ಸಂಜೆಯೇ ಸಾವಾಗಿದ್ದುದರಿಂದ ಮಾರನೆಯ ದಿನದವರೆಗೂ ಅಂತ್ಯಕ್ರಿಯೆಗೆ ಕಾಯಬೇಕಿತ್ತು.

ಕುರ್ಚಿಗಳು ಬಂದ ಕೂಡಲೇ ಜಾನು ತುಸು ದರ್ಪದಿಂದ ಶಂಕರಪ್ಪನನ್ನು ನೀವು ಅಮ್ಮನ ಪಕ್ಕವೇ ಕೂತಿರಿ ಎಂದು ಕೂರಿಸಿದ್ದಳು. ಬಂದವರೆಲ್ಲ ಅನಿವಾರ್ಯವಾಗಿ ಈಗ ಶಂಕರಪ್ಪನನ್ನು ಮಾತಾಡಿಸಲಾದರೂ ಪದ್ದಮ್ಮನ ಹೆಣದ ಬಳಿ ಬರಲೇಬೇಕಿತ್ತು. ಶಂಕರಪ್ಪ ಎಲ್ಲರ ಜೊತೆ ಜೋರಾಗಿ ಅತ್ತು ಅನಾಥನನ್ನಾಗಿ ಮಾಡಿಬಿಟ್ಟಳು ಎಂದು ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಜಾನು ವಿಚಿತ್ರವಾಗಿ ಶಂಕರಪ್ಪನನ್ನೇ ನೋಡಿ 'ನೀರು ಕುಡೀರಿ ಸ್ವಲ್ಪ' ಎಂದು ಹೊರಹೋದಳು.

ಬಂದ ನೆಂಟರಿಷ್ಟರೆಲ್ಲ ಸ್ವಲ್ಪ ಹೊತ್ತು ಪದ್ದಮ್ಮನ